ಎಂತಹ ಕಠಿಣ ಪರಿಸ್ಥಿತಿಗಳಲ್ಲಿ ದೇಶದ ರಕ್ಷಣೆಯಲ್ಲಿ ತೊಡಗಿರುತ್ತಾರೆ ಎಂಬ ಅನುಭವ ಆ ಯುದ್ಧದ ಹಡಗಿನಲ್ಲಿ ನನಗೆ ದೊರೆಯಿತು. ಮಿಲಿಟರಿ ಹೆಲಿಕಾಪ್ಟರಿನ ನನ್ನ ಕೆಲಸ ಅತ್ಯಂತ ಮುಖ್ಯವಾದದ್ದು, ಅದಕ್ಕೆ ನನ್ನ ಮೊದಲ ಆದ್ಯತೆ ನೀಡಬೇಕು ಎಂಬುದೂ ಇಂತಹ ಸಂದರ್ಭದಲ್ಲಿ ನನ್ನಲ್ಲಿ ಮೂಡುತ್ತಿತ್ತು.

ಇಂತಹ ಅದೆಷ್ಟೋ ಅನುಭವಗಳಿವೆ. ನನ್ನ ವೃತ್ತಿ ನನ್ನನ್ನು ಇಸ್ರೇಲಿನ ಬಿರು ಬಿಸಿಲ ಮರಳುಗಾಡಿಗೆ ಕರೆದೊಯ್ಯಿತು, ಸ್ವೀಡನ್ನಿನ ಆರ್ಕಿಕ್ಟ್ ವೃತ್ತದ ಬಳಿಯ ಕಡು ಚಳಿಯ 'ಫೈರಿಂಗ್ ರೇಂಜ್'ಗೂ ಕರೆದೊಯ್ಯಿತು.

ಮುಂದೆ 'ಮಾನವ ರಹಿತ ವಾಯುಯಂತ್ರ'ಗಳ ಚೀಫ್ ಡಿಸೈನರ್ ಆದೆ. ತಂಡವನ್ನು ಕಟ್ಟುವುದು, ಅನ್‌ಮ್ಯಾನ್ಡ್ ಟೆಕ್ನಾಲಜಿಯನ್ನು ಪಡೆಯುವುದು ಎಷ್ಟು ಸವಾಲಿನದಾಗಿತ್ತೋ, ವಿವಿಧ ಯೋಜನೆಗಳನ್ನು ರೂಪಿಸುವುದು, 'ಮ್ಯಾನ್ಡ್' ವಿಮಾನಗಳನ್ನು ಮಾನವ ರಹಿತವಾಗಿ ಪರಿವರ್ತಿಸುವ ಹೊಸ ಯೋಜನೆಗೆ ತಳಹದಿ ಹಾಕುವುದೂ, ನನಗೆ ಅಷ್ಟೇ ರೋಮಾಂಚಕ ಅನುಭವವಾಗಿತ್ತು.

ಮೂರು ದಶಕಗಳು, ಹೆಲಿಕಾಪ್ಟರ್, ವಿಮಾನ ಮತ್ತು ಮಾನವ ರಹಿತ ವಾಯುಯಂತ್ರಗಳ ಸಂಶೋಧನೆ ಮತ್ತು ವಿನ್ಯಾಸದಲ್ಲಿ ತೊಡಗಿದ್ದ ನಾನು, 'ಎಚ್.ಎ.ಎಲ್ ಮ್ಯಾನೇಜ್‌ಮೆಂಟ್ ಅಕಾಡೆಮಿ'ಗೆ (ಎಚ್.ಎಮ್.ಎ) ಜನರಲ್ ಮ್ಯಾನೇಜರ್ ಆದಾಗ, ನನ್ನೆಲ್ಲ ತಾಂತ್ರಿಕ ಮತ್ತು ಮ್ಯಾನೇಜ್‌ಮೆಂಟ್ ಅನುಭವವನ್ನು ಒಟ್ಟಿಗೇ ಉಪಯೋಗಿಸುವ ಸದವಕಾಶ ದೊರೆಯಿತು.

ಹೊಸದೇನನ್ನೋ ಸೃಷ್ಟಿಸುವುದು, ಕನಸು ಕಾಣುವುದು, ಆ ಕನಸನ್ನು ನನಸಿನ ಹಾದಿಗೆ ಹೊರಳಿಸಲು ಯೋಜಿಸುವುದು, ನನ್ನ ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ನನಗೆ ಅತ್ಯಂತ ಖುಷಿ ಕೊಡುವ ಕಾಯಕ.

ಈಗ ಮೂರು ತಿಂಗಳ ಹಿಂದೆ ನಿವೃತ್ತಳಾಗುವಾಗ ನಾನು ಹೇಳಿದ್ದೆ 'ನನ್ನನ್ನು ಬೀಳ್ಕೊಡುವಾಗ ಹಾರ, ಶಾಲು, ಉಡುಗೊರೆ ನೀಡಬಾರದು'. ಅವುಗಳಿಗೆ ವ್ಯರ್ಥವಾಗಿ ಹಣ ಖರ್ಚು ಮಾಡುವುದು ಬೇಡ ಎಂಬುದು ನನ್ನ ಉದ್ದೇಶವಾಗಿತ್ತು. ಆದರೆ ನನಗೆ ಅತ್ಯಂತ ಖುಷಿಯ ಉಡುಗೊರೆಯನ್ನು ನಮ್ಮ ಅಕಾಡೆಮಿಯ ಮೊದಲ ಬ್ಯಾಚಿನ 'ಪೋಸ್ಟ್ ಗ್ರಾಜುಯೆಟ್ ಡಿಪ್ಲೊಮಾ ಇನ್ ಏವಿಯೇಷನ್ ಮ್ಯಾನೇಜ್‌ಮೆಂಟ್' ವಿದ್ಯಾರ್ಥಿಗಳು ನೀಡಿದರು. ನಾನು ನಿವೃತ್ತಳಾದ ದಿನ 40 ಮರಗಳನ್ನು ನಮ್ಮ ಎಚ್.ಎಮ್.ಎ. ಆವರಣದಲ್ಲಿ ನೆಟ್ಟರು!

◆ **ವೃತ್ತಿ ಹಾಗೂ ಬದುಕಿನ ಸಮತೋಲನ ಆಧುನಿಕ ಕಾಲದ ಕುಟುಂಬಗಳಿಗೆ ಮುಖ್ಯ ಸವಾಲು. ಈ ಕಾರಣಕ್ಕಾಗಿಯೇ ಅನೇಕ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಕೆಲಸ ಬಿಡುತ್ತಿರುವುದನ್ನೂ ನೋಡುತ್ತಿದ್ದೇವೆ. 'ದುಡಿವ ಹಾದಿಯಲಿ ಜೊತೆಯಾಗಿ' ದುಡಿವ ದಂಪತಿಗಳಿಗಾಗಿ ನೀವು ಬರೆದ ಪುಸ್ತಕ, ಈ ನಿಟ್ಟಿನಲ್ಲಿ ಮುಖ್ಯ. 'ಬದುಕು ಬದಲಿಸಬಹುದು' ಅಂಕಣ ಬರಹಗಳೂ ಬದುಕಿನ ಕುರಿತಾದ ಜೀವನ ಪ್ರೀತಿಯನ್ನು ಕಾಪಿಟ್ಟುಕೊಳ್ಳಲು ಸ್ಫೂರ್ತಿ ನೀಡುವಂತಹದ್ದು. ಇಂತಹ ಕತೆಗಳ ನಿರೂಪಣೆಗಳಿಗೆ ಪ್ರೇರಣೆ ಏನು?**

ಇತ್ತೀಚಿನ ವರ್ಷಗಳಲ್ಲಿ ಈ 'ವರ್ಕ್‌ಲೈಫ್ ಬ್ಯಾಲೆನ್ಸ್' ಪುರುಷರಿಗೂ ಅಷ್ಟೇ ಸವಾಲಿನದಾಗಿದೆ. ಗಂಡ ಹೆಂಡತಿ 'ನಾವೊಂದು ತಂಡ' ವಿ ಆರ್ ಅ ಟೀಮ್ ಎಂಬ ಭಾವದಲ್ಲಿ ಮನೆಯ ಒಳಹೊರಗಿನ ಕೆಲಸಗಳನ್ನು ಹಂಚಿಕೊಂಡು ಸಹಕರಿಸಿ ದುಡಿದಾಗ ಬದುಕು ಹಸನಾಗಬಲ್ಲದು. ನನ್ನ ಪುಸ್ತಕ 'ದುಡಿವ ಹಾದಿಯಲಿ ಜೊತೆಯಾಗಿ' ಈ ಆಶಯವನ್ನು ಹೊತ್ತು, ಇಂತಹ ದುಡಿವ ದಂಪತಿಗಳ ಕತೆಗಳನ್ನು ಹೇಳುತ್ತದೆ.

ಬದುಕಿನ ಯಾವುದೇ ಸಂದರ್ಭದಲ್ಲಿ ನಮ್ಮ ಆದ್ಯತೆ ಏನು ಎಂಬುದು ನಮಗೆ ಸ್ಪಷ್ಟವಿರಬೇಕು.